# Additional Regional Commissioner and Competent Authority, Office of the Regional Commissioner

2nd Floor, BMTC building, K.H.Road, Shantinagar, Bengaluru-27 Tel: 080-22109670
e-mail: ca.investech@gmail.com

No-KPID/CA/Investec/03/2024-25 Dated: 08/07/2024

## Public Notice

**Public Notice to invite claim applications for additional documents from depositors of M/s Investech and Investech Builders and Developers Pvt Ltd, under Karnataka Protection of Interest of Depositors in Financial Establishment (KPIDFE) Act, 2004.**

According to Section 5(1) of KPIDFE Act 2004, the Additional Regional Commissioner, Bangalore Division, Bangalore has been appointed as the Competent Authority of Fraudulent establishment M/s Investech and Investech Builders and Developers Pvt Ltd, Bengaluru.

Henceforth, concerned depositors are requested to contact the Office of the Regional Commissioner and Competent Authority, 2nd Floor, BMTC Building, K.H Road, Shantinagar, Bengaluru-560027 for further information and actions. Claim applications for additional documents will be issued to the depositor/ authorized representative/nominee and in the absence of the nominee, the Power of Attorney (PoA) holder, who will approach the office with a clear identity card with photograph/proof of investment documents or original copies of Bonds, Proof of Investments, official letter/Power Of Attorney (PoA) documents.

- Opening date for Submission of additional documents is **15/07/2024**. Last date for submission of additional documents will be **14/08/2024 before 5.30 PM.** The claim applications for additional documents will be received only during office hours between 10:00 A.M and 5:30 P.M. (Date: **15/07/2024 to 14/08/2024**)
- If false/concocted documents are submitted without legally valid proof of investment, such applications will be rejected summarily and Civil and Criminal cases will be registered against such applicants as per law.
- There will be no facility/provision to submit the claim applications through online.
- **The following documents to be produced for verification.**
  - a) Original ID-Aadhar, PAN with Xerox for attestation.
  - b) Bank Pass sheets 2 months prior to date of investment to till date in M/s Investech and Investech Builders and Developers Pvt Ltd duly attested by the bank manager to be furnished.
  - c) Copy of Passbook front sheet with copy of pages showing KYC.
  - d) Bonds/Agreements/Notarized affidavits.
  - e) General power of attorney in the case of Authorised agent and statutory documents shall be produced in the original.
  - f) Where copies are allowed as support documents, either ink signed attested clear Xerox copy of every page shall be provided or original shall be provided alongside Xerox copy for attestation by concerned officer. Scans/whatsapp copies are not acceptable.

**Note: Special procedure**

I) Nominee or Legal Heir or Members of the immediate family- Parents/Spouse/Children, due to illness or disability or death of the depositor.

ii) Members of the extended family due to illness or disability or death of the depositor and absence or disability or death of the Nominee or Legal Heir or Members of the immediate family, provided Depositor/Nominee/Legal Heir has provided signed authorisation or death certificate is available.

iii) Parents of Minor children.

iv) Power of Attorney Holder duly authorized for the specific purposes with reasons.

v) In case of death of the Depositor, death certificate and survival certificate from Tahsildar/Mandal Revenue officer/Competent Court.

vi) Pass book issued by the financial establishment.

**Special instructions:**

- Before submitting the additional documents, must and should has to produce the Original acknowledgment copy received from the prior Competent Authority while submitting claim application with Xerox copy of the same.

  There is no provision to submit new claim applications for Depositors/Applicants.
- **Place of receipt/submission of claim application: The Office of Special Officer and Competent Authorities, I.M.A. and Other Fraud Cases, 4th Floor, Podium Block, Visvesvaraya Tower, Dr B.R Ambedkar Road, Bangalore 560001.**
- For further information regarding the procedures for submission of applications for additional documents, applicants may contact the Office of the Additional Regional Commissioner and Competent Authority, 2nd Floor, BMTC Building, K.H Road, Shantinagar, Bengaluru-560027.
- For further information visit website **https://rcb.karnataka.gov.in** or **https://sploca.karnataka.gov.in**.

**Sd/-**
**Competent Authority**
**M/s Investech and Investech Builders and Developers Pvt Ltd, and**
**Additional Regional Commissioner,**
**Revenue Department, Bengaluru Division.**

DIPR/CP/ /AKAR/2024-25

SIZE : 39X8M

# ಅಪರ ಪ್ರಾದೇಶಿಕ ಆಯುಕ್ತರು ಹಾಗೂ ಸಕ್ಷಮ ಪ್ರಾಧಿಕಾರಿಗಳು, ಪ್ರಾದೇಶಿಕ ಆಯುಕ್ತರ ಕಛೇರಿ

2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್ ರಸ್ತೆ, ಬೆಂಗಳೂರು–27
ದೂರವಾಣಿ : 080–22109665 ಇ–ಮೇಲ್: ca.investech@gmail.com

ಸಂಖ್ಯೆ: ಕೆಪಿಐಡಿ/ಸಿಎ/ಇನ್ ವೆಸ್ಟೆಕ್/03/2024–25 ದಿನಾಂಕ: 08/07/2024

## ಸಾರ್ವಜನಿಕ ಪ್ರಕಟಣೆ

**ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ 2004 ರ ಮೆ॥ ಇನ್‌ವೆಸ್ಟೆಕ್ ಅಂಡ್ ಇನ್‌ವೆಸ್ಟೆಕ್ ಬಿಲ್ಡರ್ ಅಂಡ್ ಡೆವಲಪ್ಪರ್ಸ್ ಪ್ರೈ.ಲಿ, ದೂಷಿತ ಸಂಸ್ಥೆಯ ಠೇವಣಿದಾರರಿಂದ ಸ್ವೀಕೃತವಾಗಿರುವ ಕ್ಲೇಮು ಅರ್ಜಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಸಾರ್ವಜನಿಕ ತಿಳಿವಳಿಕೆ.**

ಅಪರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರನ್ನು M/s Investech and Investech Builders and Developers Pvt.Ltd., ಬೆಂಗಳೂರು ದೂಷಿತ ಹಣಕಾಸು ಕಂಪನಿಗೆ ಕೆ.ಪಿ.ಐ.ಡಿ.ಎಫ್.ಇ ಕಾಯ್ದೆ 2004 ರ ಕಲಂ 5(1) ರಡಿ ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

ಠೇವಣಿದಾರರು/ಠೇವಣಿದಾರರ ಪರವಾಗಿ ವಾರಸುದಾರರು/ನಾಮಿನಿದಾರರು, ಠೇವಣಿದಾರರ ವಾರಸುದಾರರು/ನಾಮಿನಿದಾರರ ಪರವಾಗಿ ಬರುವ ವ್ಯಕ್ತಿಯು ಪವರ್ ಆಫ್ ಅಟಾರ್ನಿ ಮತ್ತು ಭಾವಚಿತ್ರವಿರುವ ಗುರುತಿನ ಚೀಟಿ ದಾಖಲೆಯೊಂದಿಗೆ, ಹಾಜರಾಗಿ ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಅವಶ್ಯವಿರುವ ನಿಗಧಿತ ನಮೂನೆಯನ್ನು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, **(ಐ.ಎಂ.ಎ ಹಾಗೂ ಇತರೆ ಕೆಪಿಐಡಿಎಫ್‌ಇ), 4ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ ಚಿಕ್ಕ ಗೋಪುರ, ಬೆಂಗಳೂರು–560001** ಕಛೇರಿಯಿಂದ ಪಡೆದು ಪೂರ್ತಿ ಭರ್ತಿ ಮಾಡಿ ಈ ಹಿಂದಿನ ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸಿರುವ ಕ್ಲೇಮು ಅರ್ಜಿಗೆ ಸಂಬಂಧಿಸಿದಂತೆ ಪಡೆದಿರುವ ಮೂಲ. ಸ್ವೀಕೃತಿಯೊಂದಿಗೆ ಮೂಲ ಬಾಂಡ್ ಪ್ರತಿಗಳು, ಕಂಪನಿಗೆ ಹಣ ಸಂದಾಯ ಮಾಡಿರುವ ಮೂಲ ರಸೀದಿ ಮತ್ತು ಇತರೆ ದಾಖಲಾತಿಗಳನ್ನು ಲಗತ್ತಿಸಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಮುಂದುವರೆದು ಪೂರಕ ದಾಖಲೆಗಳನ್ನು ಸಲ್ಲಿಸಲು ಈ ಕೆಳಗೆ ಕಾಣಿಸಿರುವ ಸೂಚನೆಗಳನ್ನು ಪಾಲಿಸುವುದು ಮತ್ತು ಸೂಚಿಸಿರುವ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

- ಠೇವಣಿದಾರರಿಂದ ಸ್ವೀಕೃತವಾಗಿರುವ ಕ್ಲೇಮು ಅರ್ಜಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ದಾಖಲೆಗಳನ್ನು ದಿನಾಂಕ: **15/07/2024 ರಿಂದ 14/08/2024** ರವರೆಗೆ ಕಛೇರಿ ಸಮಯದಲ್ಲಿ ಬೆಳಿಗ್ಗೆ 10–00 ರಿಂದ ಸಂಜೆ 5–30 ರವರೆಗೆ ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.
- ತಪ್ಪಾಗಿ ಅಥವಾ ಆಧಾರವಿಲ್ಲದೆ ಸ್ವಯಂ–ಸೃಷ್ಟಿತ ಅರ್ಜಿಗಳನ್ನು ಸಲ್ಲಿಸಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರುಗಳ ವಿರುದ್ಧ ನಿಯಮಾನುಸಾರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗುವುದು.
- ಆನ್‌ಲೈನ್ ಮೂಲಕ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಯಾವುದೇ ಅವಕಾಶ ಇರುವುದಿಲ್ಲ.

**ಸಲ್ಲಿಸಬೇಕಾಗಿರುವ ಹೆಚ್ಚುವರಿ ದಾಖಲೆಗಳು:**

1. ಠೇವಣಿದಾರರ ಮೂಲ ಆಧಾರ್, ಪ್ಯಾನ್‌ಗಳೊಂದಿಗೆ ನೋಟರಿ/ ಪತ್ರಾಂಕಿತ ಅಧಿಕಾರಿ/ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳು.
2. ಠೇವಣಿದಾರರು ಕಂಪನಿಯಲ್ಲಿ ಹಣ ಹೂಡುವ 2 ತಿಂಗಳ ಮುಂಚಿನ ಅವಧಿಯಿಂದ ಈವರೆವಿಗೂ ಬ್ಯಾಂಕ್‌ನೊಂದಿಗೆ ನಡೆಸಿರುವ ವ್ಯವಹಾರದ ಬಗ್ಗೆ ಬ್ಯಾಂಕ್ ಮ್ಯಾನೇಜರ್ ರವರು ದೃಢೀಕರಿಸಿದ ಬ್ಯಾಂಕ್ ಪಾಸ್ ಪುಸ್ತಕದ ದೃಢೀಕೃತ ನಕಲು ಪ್ರತಿ.
3. ಕೆವೈಸಿ ನಂಬರ್ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು.
4. ಮೂಲ ಬಾಂಡ್‌ಗಳು/ ಅಗ್ರಿಮೆಂಟ್‌ಗಳು/ ನೋಟರಿ ಮಾಡಿರುವ ಅಫಿಡೆವಿಟ್‌ಗಳು
5. ಠೇವಣಿದಾರರು/ಅಧಿಕೃತ ಪ್ರತಿನಿಧಿ/ ನಾಮಿನಿದಾರರು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಆಟಾರ್ನಿನ ಹೊಂದಿರುವವರು ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಬಹುದಾಗಿರುತ್ತದೆ.
6. ಅವಶ್ಯವಿರುವ ಹೆಚ್ಚುವರಿ ದಾಖಲೆಗಳ ಜೆರಾಕ್ಸ್ ಪ್ರತಿಯನ್ನು ಸಂಬಂಧಪಟ್ಟವರಿಂದ ಧೃಡೀಕರಿಸಿರುವ ದಾಖಲೆಗಳನ್ನು ಮಾತ್ರ ಸಲ್ಲಿಸಲು ಅವಕಾಶವಿದ್ದು, ಸ್ಕ್ಯಾನ್ ಮಾಡಿರುವ ಮತ್ತು ವ್ಯಾಟ್ಸ್ ಆಪ್ ಮುಖಾಂತರ ಪಡೆದಿರುವ ದಾಖಲೆಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

**ಸೂಚನೆಗಳು: ವಿಶೇಷ ಪ್ರಕ್ರಿಯೆಗಳು**

1. ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಠೇವಣೆದಾರರು ಗಂಭೀರವಾದ ಆರೋಗ್ಯ ಸಮಸ್ಯೆಯಿಂದ ಹಾಜರಾಗದೇ ಇರುವ ಸಮಯದಲ್ಲಿ ಮರಣ ಹೊಂದಿದ್ದಲ್ಲಿ, ಠೇವಣಿದಾರರ ಕುಟುಂಬ– ಪೋಷಕರು/ಗಂಡ ಅಥವಾ ಹೆಂಡತಿ/ ಮಕ್ಕಳು ಹಾಜರಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಬಹುದಾಗಿರುತ್ತದೆ.
2. ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸಲು ಠೇವಣಿದಾರರು ಗಂಭೀರವಾದ ಆರೋಗ್ಯ ಸಮಸ್ಯೆಯಿಂದ ಹಾಜರಾಗದೇ ಇರುವ ಸಮಯದಲ್ಲಿ/ ಮರಣ ಹೊಂದಿದ್ದಲ್ಲಿ, ಠೇವಣಿದಾರರ ವಾರಸುದಾರರು/ ನಾಮಿನಿದಾರರು ವಾರಸುದಾರರ ಪ್ರಮಾಣ ಪತ್ರ, ಠೇವಣಿದಾರರ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.
3. ಅಪ್ರಾಪ್ತ ವಯಸ್ಸಿನ ಠೇವಣಿದಾರರ ಪೋಷಕರು.
4. ಅಧಿಕೃತ ಪ್ರತಿನಿಧಿಯು ಸಕಾರಣದೊಂದಿಗೆ ಪವರ್ ಆಫ್ ಅಟಾರ್ನಿಯನ್ನು ಹೊಂದಿರಬೇಕಾಗಿರುತ್ತದೆ.
5. ಠೇವಣಿದಾರರು ಮರಣ ಹೊಂದಿದ್ದ ಸಮಯದಲ್ಲಿ ತಹಶೀಲ್ದಾರ್/ ಮಂಡಲ್ ಕಂದಾಯ ಅಧಿಕಾರಿ/ ಸಕ್ಷಮ ಪ್ರಾಧಿಕಾರ/ ಸಕ್ಷಮ ನ್ಯಾಯಾಲಯದಿಂದ ಪಡೆದ ಮರಣ ಪ್ರಮಾಣ ಪತ್ರ ಹಾಗೂ ಕುಟುಂಬ ಸದಸ್ಯರ ಪ್ರಮಾಣ ಪತ್ರ.
6. ದೂಷಿತ ಕಂಪನಿಯಿಂದ ಪಡೆದಿರುವ ಪಾಸ್ ಪುಸ್ತಕ.

**ವಿಶೇಷ ಸೂಚನೆಗಳು:**

1. ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸುವ ಸಂಬಂಧ ಅರ್ಜಿ ಸಲ್ಲಿಸಲು ಠೇವಣಿದಾರರು ಈ ಹಿಂದಿನ ಸಕ್ಷಮ ಪ್ರಾಧಿಕಾರಿಗಳಿಗೆ ಸಲ್ಲಿಸಿರುವ ಕ್ಲೇಮು ಅರ್ಜಿಗೆ ಸಂಬಂಧಿಸಿದಂತೆ ಪಡೆದಿರುವ ಮೂಲ ಸ್ವೀಕೃತಿಯನ್ನು ಕಡ್ಡಾಯವಾಗಿ ಹಾಜರುಪಡಿಸುವುದು.
2. ಠೇವಣಿದಾರರು/ವಾರಸುದಾರರು/ನಾಮಿನಿದಾರರು ಹೊಸದಾಗಿ ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
3. ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸುವ ಸಂಬಂಧ ಅರ್ಜಿ ಸ್ವೀಕರಿಸಲು/ ಸಲ್ಲಿಸಬೇಕಾದ ಕಛೇರಿ: **ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,(ಐ.ಎಂ.ಎ ಹಾಗೂ ಇತರೆ ಕೆಪಿಐಡಿಎಫ್‌ಇ), 4ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ ಚಿಕ್ಕ ಗೋಪುರ, ಬೆಂಗಳೂರು– 560001**.
4. ಹೆಚ್ಚುವರಿ ದಾಖಲೆಗಳನ್ನು ಸಲ್ಲಿಸುವ ಸಂಬಂಧ ಅರ್ಜಿ ಸಲ್ಲಿಸಲು ಸಲ್ಲಿಸುವ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಅರ್ಜಿದಾರರು ಅಪರ ಪ್ರಾದೇಶಿಕ ಆಯುಕ್ತರು ಹಾಗೂ ಸಕ್ಷಮ ಪ್ರಾಧಿಕಾರಿಗಳು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಕಂದಾಯ ಇಲಾಖೆ, 2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು–27 ಕಛೇರಿಗೆ ಭೇಟಿ ನೀಡಬಹುದಾಗಿರುತ್ತದೆ.
5. ಹೆಚ್ಚಿನ ಮಾಹಿತಿಗಾಗಿ **https://rcb.karnataka.gov.in or https://sploca.karnataka.gov.in.** ವೆಬ್‌ಸೈಟ್ ವಿಳಾಸಕ್ಕೆ ಭೇಟಿ ನೀಡಿ.

**ಸಹಿ/–**
**ಸಕ್ಷಮ ಪ್ರಾಧಿಕಾರಿಗಳು,**
**ಇನ್‌ವೆಸ್ಟೆಕ್ ಹಾಗೂ ಇನ್‌ವೆಸ್ಟೆಕ್ ಬಿಲ್ಡರ್ಸ್ ಅಂಡ್ ಡೆವಲಪ್ಪರ್ಸ್ ಪ್ರೈ.ಲಿ**
**ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ,**
**ಕಂದಾಯ ಇಲಾಖೆ, ಬೆಂಗಳೂರು.**

ವಾ.ಸಾ.ಸಂ.ಇ/ವಾಪ್ರ/ /ಆಕಾರ್/2024–25

SIZE : 39X8M